# IN THE COURT OF THE ADDL. SENIOR CIVIL JUDGE & JMFC., GUBBI

# **OS - 130/2024**

Witness present and duly sworn on : 10.03.2026.

Cross Examination: by Counsel for Defendants :

ಈ ದಾವೆಯ 2 ನೇ ವಾದಿ ಕರಿಯಪ್ಪ ನನ್ನ ತಂದೆ ಎಂದರೆ ಸರಿ. ಕರಿಯಪ್ಪ ನವರಿಗೆ ಇಬ್ಬರು ಅಣ್ಣ ತಮ್ಮಂದಿರು. ಅವರುಗಳು ಸಂಜೀವಪ್ಪ ಮತ್ತು ಕರಿಯಪ್ಪ. ಅವರುಗಳು ತಂದೆಯ ಹೆಸರು ಗಿರಿಯಪ್ಪ. ಗಿರಿಯಪ್ಪರವರು ಮೂರು ಜನ ಅಣ್ಣ ತಮ್ಮಂದಿರು. ಅವರುಗಳು ಗಿರಿಯಪ್ಪ, ನರಸಪ್ಪ ಮತ್ತು ಮೇಲಪ್ಪ. ಅವರುಗಳ ತಂದೆ ಸಂಜೀವಯ್ಯ ಎಂದರೆ ಸರಿ. ಸದರಿ ಸಂಜೀವಯ್ಯ ಮತ್ತು ಅವರ ಮಕ್ಕಳಾದ ಗಿರಿಯಪ್ಪ, ನರಸಪ್ಪ, ಮೇಲಪ್ಪ ರವರು ಒಟ್ಟು ಕುಟುಂಬದಲ್ಲಿ ವಾಸ ಇದ್ದರು ಎಂದರೆ ಸರಿ. ಸದರಿ ಒಟ್ಟು ಕುಟುಂಬಕ್ಕೆ ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಜಮೀನುಗಳು ಸಹ ಇದ್ದವು ಎಂದರೆ ಸರಿ. ಗಿರಿಯಪ್ಪ ರವರ ತಂದೆ ಸಂಜೀವಯ್ಯ ರವರನ್ನು ನಾನು ನೋಡಿಲ್ಲ. ಸದರಿ ಸಂಜೀವಯ್ಯ ರವರ ಮರಣದ ನಂತರ ಅವರ ಮಕ್ಕಳಾದ ಗಿರಿಯಪ್ಪ, ನರಸಪ್ಪ ಮತ್ತು ಮೇಲಪ್ಪ ಒಟ್ಟು ಕುಟುಂಬದಲ್ಲಿ ವಾಸ ಇದ್ದರು ಎಂದರೆ ಸಂಜೀವಯ್ಯ ನವರ ಜೀವಿತ ಅವಧಿಯಲ್ಲಿ ವಿಭಸಾಗ ಮಾಡಿಕೊಟ್ಟಿದ್ದರು. ಸಂಜೀವಯ್ಯ ನವರ ಜೀವಿತಾವಧಿಯಲ್ಲಿ ವಿಭಾಗ ಮಾಡಿಕೊಟ್ಟಿದ್ದರು ಎಂದು ತೋರಿಸಲು ದಾಖಲೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ಮೌಖಿಕವಾಗಿ ವಿಭಾಗ ಆಗಿರುತ್ತದೆ.

ಸದರಿ ವಿಭಾದಲ್ಲಿ ಕಚ್ಚೇನಹಳ್ಳಿ ಗ್ರಾಮದ ಸರ್ವೆ ನಂ.31 ರಲ್ಲಿ 25 ½ ಗುಂಟೆ, ಸರ್ವೆ ನಂ.40 ರಲ್ಲಿ 2 ಎಕರೆ 6½ ಗುಂಟೆ, ಸರ್ವೆ ನಂ.38 ರಲ್ಲಿ 1 ಎಕರೆ 9 ಗುಂಟೆ, ಸರ್ವೆ ನಂ.39/4 ರಲ್ಲಿ 35 ಗುಂಟೆ, ಗಡಿಅಂಕನಹಳ್ಳಿಯ ಸರ್ವೆ ನಂ.40/1 ಬಿ ರಲ್ಲಿ 8 ಗುಂಟೆ ಮತ್ತು ಸರ್ವೆ ನಂ.39/1 ಬಿ ರಲ್ಲಿ 1 ಎಕರೆ 5 ಗುಂಟೆ ಜಮೀನುಗಳು 2 ನೇ ಪ್ರತಿವಾದಿಯ ತಂದೆ ಗಿರಿಯಪ್ಪ ರವರ ಭಾಗಕ್ಕೆ ಬಂದಿತ್ತು ಎಂದರೆ ಸರಿ. ಗಿರಿಯಪ್ಪ ನವರು ಸದರಿ

ಜಮೀನಿನಲ್ಲಿ ಬೆಳೆ ಬೆಳೆಯುತ್ತಿದ್ದರು ಎಂದರೆ ಸರಿಯಲ್ಲ. ನಾನು ಗಿರಿಯಪ್ಪ ನವರನ್ನು ನೋಡಿಲ್ಲ ಎಂದರೆ ಸರಿ. ಗಿರಿಯಪ್ಪ ನವರಿಗೆ ಸದರಿ ಜಮೀನುಗಳಿಂದ ಆದಾಯ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ಸದರಿ ಜಮೀನುಗಳು ಬಂಜರು ಎಂದು ನನಗೆ ಹೇಳಿದ್ದರು. ಗಿರಿಯಪ್ಪನವರು ಸದರಿ ಜಮೀನುಗಳ ಆದಾಯದಿಂದ ಬೇರೆ ಜಮೀನುಗಳನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ.

ಗಡಿಅಂಕನಹಳ್ಳಿಯ ಗ್ರಾಮದ ಸರ್ವೆ ನಂ.39/2 ರಲ್ಲಿ 2 ಎಕರೆ 10 ಗುಂಟೆ, ಸರ್ವೆ ನಂ.40/2 ರಲ್ಲಿ 1 ಎಕರೆ 27 ಗುಂಟೆ ಜಮೀನುಗಳನ್ನು ಗಿರಿಯಪ್ಪನವರು ಮೇಲಪ್ಪನವರಿಂದ ಖರೀದಿ ಮಾಡಿದ್ದರು ಎಂದರೆ ಸರಿ. ಸರ್ವೆ ನಂ.39/3 ರಲ್ಲಿ 3 ಎಕರೆ 16 ಗುಂಟೆ ಮತ್ತು ಸರ್ವೆ ನಂ.40/3 ರಲ್ಲಿ 2 ಎಕರೆ 3 ಗಂಟೆ ಜಮೀನನ್ನು ಗಿರಿಯಪ್ಪನವರು ಚಿಕ್ಕ ಸಿದ್ದಯ್ಯ ಬಿನ್ ನರಸಪ್ಪ ರವರಿಂದ ಖರೀದಿ ಮಾಡಿದ್ದರು ಎಂದರೆ ಸರಿ. ಸದರಿ ಜಮೀನುಗಳನ್ನು ಖರೀದಿ ಮಾಡಲು ಗಿರಿಯಪ್ಪ ನವರ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗಿರಿಯಪ್ಪ ನವರು ತೆಂಗಿನಕಾಯಿ ವ್ಯಾಪಾರದ ಆದಾಯದಿಂದ ಜೀವನ ನಡೆಸಿ ಉಳಿದ ಹಣದಿಂದ ಸದರಿ ಖರೀದಿ ಮಾಡಿರುತ್ತಾರೆ. ಗಿರಿಯಪ್ಪನವರು ತೆಂಗಿನ ಕಾಯಿ ವ್ಯಾಪಾರ ಮಾಡುತ್ತಿದ್ದರು ಎಂದು ತೋರಿಸಲು ನ್ಯಾಯಾಲಯದಲ್ಲಿ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆ ಸದರಿ ವ್ಯಾಪಾರದ ಮಾಹಿತಿ ನನಗೆ ತಿಳಿಸಿರುತ್ತಾರೆ. ಸದರಿ ಆಸ್ತಿಗಳನ್ನು ಗಿರಿಯಪ್ಪನವರು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುವ ಕಾರಣ ಅವುಗಳು ಒಟ್ಟು ಕುಟುಂಬದ ಸ್ವತ್ತು ಎಂದರೆ ಸ್ವಂತ ಆದಾಯದಿಂದ ಖರೀದಿ ಮಾಡಿರುತ್ತಾರೆ.

ಗಿರಿಯಪ್ಪ ಮತ್ತು ಅವರ ಮಕ್ಕಳಾದ ಸಂಜೀವಪ್ಪ ಮತ್ತು ಕರಿಯಪ್ಪನವರ ಕುಟುಂಬದಲ್ಲಿ ಗಿರಿಯಪ್ಪನವರು ಕರ್ತಾ ಆಗಿದ್ದರು ಎಂದರೆ ಸರಿ. ಆದ ಕಾರಣ ಜಮೀನಿನ ಆದಾಯ ಮತ್ತು ವ್ಯವಹಾರಗಳನ್ನು ಗಿರಿಯಪ್ಪನವರು ನೋಡಿಕೊಳ್ಳುತ್ತಿದ್ದರು ಎಂದರೆ ಜಮೀನಿನ ಆದಾಯ ಇರಲಿಲ್ಲ. ನನ್ನ ತಂದೆ ಕರಿಯಪ್ಪ ಮತ್ತು ಅವರ ಅಣ್ಣ ಸಂಜೀವಪ್ಪ ನವರು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ಕಚ್ಚೆನಹಳ್ಳಿ ಗ್ರಾಮದ ಸರ್ವೆ ನಂ.31 ರಲ್ಲಿ 25 ½ ಗುಂಟೆ, ಸರ್ವೆ ನಂ.30/4 ರಲ್ಲಿ 1 ಎಕರೆ 8 ಗುಂಟೆ,

ಸರ್ವೆ ನಂ.40 ರಲ್ಲಿ 2 ಎಕರೆ 6 ½ ಗುಂಟೆ, ಸರ್ವೆ ನಂ.38 ರಲ್ಲಿ 1 ಎಕರೆ 9 ಗುಂಟೆ, ಸರ್ವೆ ನಂ.39/4 ರಲ್ಲಿ 35 ಗುಂಟೆ, ಗಡಿಅಂಕನಹಳ್ಳಿ ಗ್ರಾಮದ ಸರ್ವೆ ನಂ.40/1 ಬಿ ರಲ್ಲಿ 8 ಗುಂಟೆ, ಸರ್ವೆ ನಂ.40/2 ಬಿ ರಲ್ಲಿ 30 ಗುಂಟೆ, ಸರ್ವೆ ನಂ.40/3 ರಲ್ಲಿ 2 ಎಕರೆ 3 ಗುಂಟೆ, ಸರ್ವೆ ನಂ.39/1 ಬಿ ರಲ್ಲಿ 1 ಎಕರೆ 5 ಗುಂಟೆ, ಸರ್ವೆ ನಂ.39/2 ಬಿ ರಲ್ಲಿ 1 ಎಕರೆ 6 ಗುಂಟೆ, ಸರ್ವೆ ನಂ.39/2 ಬಿ ರಲ್ಲಿ 2 ಎಕರೆ 10 ಗುಂಟೆ ನನ್ನ ತಂದೆಯ ಭಾಗಕ್ಕೆ ಬಂದಿತ್ತು ಎಂದರೆ ಸರ್ವೆ ನಂ.30/4 ಜಮೀನಿನ ವಿಸ್ತೀರ್ಣವನ್ನು ಹೊರತುಪಡಿಸಿ ಬೇರೆ ಜಮೀನುಗಳು ಬಂದಿರುತ್ತವೆ. ಸದರಿ ಜಮೀನುಗಳು ನನ್ನ ತಂದೆಯ ಭಾಗಕ್ಕೆ ಬಂದ ನಂತರ ಅವರು ಅವುಗಳನ್ನು ಅನುಭವಿಸುತ್ತಿದ್ದರು ಎಂದರೆ ಸರಿ. ಅದೇ ರೀತಿ ಸದರಿ ಜಮೀನುಗಳ ಖಾತೆ ಪಹಣಿಗಳು ನನ್ನ ತಂದೆಯ ಹೆಸರಿನಲ್ಲಿ ಇದ್ದವು ಎಂದರೆ ಸರಿ.

ನನ್ನ ತಂದೆಗೆ ವು ಒಟ್ಟು 5 ಜನ ಮಕ್ಕಳು. ಅವರುಗಳು ನಾನು ಶಿವಕುಮಾರ್, 1 ರಿಂದ 4 ನೇ ಪ್ರತಿವಾದಿಗಳಾದ ವಸಂತಮ್ಮ, ಶಿವಮ್ಮ, ಸುಜಾತ, ಅನಿತಾ ಎಂದರೆ ಸರಿ. ನನ್ನ ತಂದೆ ಮತ್ತು ಸಂಜೀವಪ್ಪ ರವರ ನಡುವೆ ಆದ ವಿಭಾಗದಲ್ಲಿ ಸಂಜೀವಪ್ಪ ನವರಿಗೆ ಗಿರಿಯಪ್ಪನವರ ಆಸ್ತಿಗಳು ಬಂದಿದ್ದವು ಎಂದರೆ ಸರಿ. ನನ್ನ ತಂದೆ ಮತ್ತು ಸಂಜೀವಪ್ಪ ನವರು ಅವರ ಭಾಗಕ್ಕೆ ಬಂದಿರುವ ಜಮೀನುಗಳನ್ನು ಅನುಭವಿಸಿಕೊಂಡು ಬರುತ್ತಿದ್ದಾರೆಂದರೆ ಸರಿ. ನನ್ನ ತಂದೆ, ನಾನು ಮತ್ತು ನನ್ನ ಸಹೋದರಿಯರಾದ 1 ರಿಂದ 4 ನೇ ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿ. ಆದ ಕಾರಣ ಒಟ್ಟು ಕುಟುಂಬದ ಸದಸ್ಯರಾಗಿ ನಾನು ಮತ್ತು ನನ್ನ ಸಹೋದರಿಯರು ನನ್ನ ತಂದೆಯವರು ದಾವಾ ಆಸ್ತಿಗಳನ್ನು ಅನುಭವಿಸಿಕೊಂಡು ಬಂದಿದ್ದೇವು ಎಂದರೆ ಸರಿ.

ನನ್ನ ಅಕ್ಕ 1 ನೇ ಪ್ರತಿವಾದಿಯಾದ ವಸಂತಮ್ಮ ರವರು ಅವರ ತಂಗಿ, ತಂದೆ ಮತ್ತು ನನ್ನ ವಿರುದ್ದ ಗುಬ್ಬಿಯ ಸಿವಿಲ್ ನ್ಯಾಯಾಲಯದಲ್ಲಿ ವಿಭಾಗ ಕೋರಿ ದಾವೆಯಲ್ಲಿ OS No.189/2013 ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಂದೆಗೆ ಬಂದಿದ್ದ ಜಮೀನುಗಳಿಗೆ ಬಂದಿದ್ದ ಒಟ್ಟು 8 ಜಮೀನುಗಳಿಗೆ ಸಲ್ಲಿಸಿದ್ದರು ಎಂದರೆ ಸರಿ. ಈ ದಾವೆಯ ಆಸ್ತಿಗಳು ಸಹ OS No.189/2013 ದಾವೆಯಲ್ಲಿ ಸೇರಿದ್ದವು ಎಂದರೆ ಸರಿ. ಸದರಿ ದಾವೆಯಲ್ಲಿ ನನಗೆ ಮತ್ತು ನನ್ನ ತಂದೆಗೆ ನ್ಯಾಯಾಲಯದಿಂದ ಸಮನ್ಸ ಬಂದಿತ್ತು ಎಂದರೆ ಸರಿ.

ಅದರ ನಂತರ ನಾನು ಮತ್ತು ನನ್ನ ತಂದೆ ವಕೀಲರ ಮೂಲಕ ಸದರಿ ದಾವೆಯಲ್ಲಿ ಹಾಜರಾದೇವು ಎಂದರೆ ಸರಿ. ಸದರಿ ದಾವೆಯು ಕಾನೂನು ಬಾಹಿರವಾಗಿದೆ ಎಂದು ನಾನು ಅರ್ಜಿ ಸಲ್ಲಿಸಿದೇನು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯನ್ನು ವಜಾ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಮೂಹಿತಿ ನನಗೆ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅರ್ಜಿ ವಜಾ ಆದ ನಂತರ ವಿಚಾರಣೆ ನಡೆದ ನಂತರ OS No.189/2013 ದಾವೆಯನ್ನು ದಿನಾಂಕಃ 17.08.2016 ರಂದು ಆದೇಶ ಆಗಿದೆ ಎಂದರೆ ಸರಿ. ಸದರಿ ಆದೇಶದಂತೆ ನನಗೆ, ನನ್ನ ತಂದೆ ಹಾಗೂ 4 ಜನ ಸಹೋದರಿಯರಿಗೆ ತಲಾ 1/6 ಭಾಗ ಬರಬೇಕೆಂಬ ಆದೇಶ ಆಗಿದೆ ಎಂದರೆ ಸರಿ. ಸದರಿ ಆದೇಶವನ್ನು ನಾನು ಮತ್ತು ನನ್ನ ತಂದೆಯು RA No.75/2016 ರಲ್ಲಿ ಮೇಲ್ಮನವಿ ಸಲ್ಲಿಸಿದ್ದೇವು ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ವಕೀಲರು ಸರಿಯಾಗಿ ಮಾಹಿತಿ ನೀಡಿರುವುದಿಲ್ಲ. ಮೇಲ್ಮನವಿ ವಜಾ ಆದ ನಂತರ ನಾವು ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ RSA No.376/2019 ಸಲ್ಲಿಸಿದ್ದೇವು ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿದೆ ಎಂದರೆ ಲಿಖಿತ ಪತ್ರ ಸಲ್ಲಿಸದೆ ಇದ್ದ ಕಾರಣ ವಜಾ ಆಗಿದೆ. RSA No.376/2019 ಆದೇಶದ ಮಾಹಿತಿ ನನಗೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ವಕೀಲರು ಸದರಿ ಆದೇಶದ ಮಾಹಿತಿ ತಿಳಿಸಿರುತ್ತಾರೆ. RSA No.376/2019 ಆದೇಶದ ವಿರುದ್ದ ನಾವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೇನು. ಸದರಿ ನ್ಯಾಯಾಲಯದಲ್ಲಿ ನಾನು ಸಲ್ಲಿಸಿದ ಪ್ರಕರಣ ವಜಾ ಆಗಿದೆ.

ಸದರಿ ಆದೇಶಗಳ ನಂತರ 1 ನೇ ಪ್ರತಿವಾದಿಯು ಗುಬ್ಬಿಯ ಸಿವಿಲ್ ? ನ್ಯಾಯಾಲಯದಲ್ಲಿ FDP 5/2019 ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾವು ಹಾಜರಾಗಿ ತಕರಾರು ಸಲ್ಲಿಸಿದ ನಂತರ, ಅದರಲ್ಲಿ ಆಸ್ತಿಗಳ ಅಳತೆ ಆಗಿದೆ ಎಂದರೆ ಸರಿ. ಅಳತೆಯ ಕಾರ್ಯವನ್ನು Court commissioner ಮುಗಿಸಿ ವರದಿ ಸಲ್ಲಿಸಿದ್ದಾರೆಂದರೆ ಸರಿ. ಸದರಿ ಅಳತೆ ಕಾರ್ಯವನ್ನು ಪರಿಗಣಿಸಿ ನ್ಯಾಯಾಲಯವು ಆದೇಶ ಮಾಡಿದೆ ಎಂದರೆ ಅಳತೆ ಕಾರ್ಯ ಸರಿ ಆಗಿರುವುದಿಲ್ಲ. ಸದರಿ ಆದೇಶದ ನಂತರ ಸ್ಟಾಂಪ್ ಪೇಪರ್ ಗಳಲ್ಲಿ ಪ್ರತಿವಾದಿಗಳು ಅಂತಿಮ ಡಿಕ್ರಿ ಪಡೆದಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ಡಿಕ್ರಿಯ ಆದೇಶದ ನಂತರ ಪ್ರತಿವಾದಿಗಳು ಅವರಿಗೆ ಬಂದಿರುವ ಆಸ್ತಿಗಳು ಹಾಗೂ ದಾವಾ ಆಸ್ತಿಗಳನ್ನು ಸಹ

ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆದೇಶವನ್ನು ನಾನು ಮತ್ತು ನನ್ನ ತಂದೆ RA No.45/2025 ರಲ್ಲಿ ಪ್ರಶ್ನಿಸಿರುತ್ತೇವೆ ಮತ್ತು ಅದರಲ್ಲಿ ತಡೆಯಾಜ್ಞೆ ನೀಡಿರುತ್ತಾರೆ.

(Further cross examination deferred at the request of counsel for the defendant No.1 to 4)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi